# Achievement In NCC
## 07-Jan-2019

### (ಎನ್.ಸಿ.ಸಿ ಯಲ್ಲಿ ಸಾಧನೆ)



ಅಕ್ಟೋಬರ್ ೨೦೧೮ರಲ್ಲಿ ದೆಹಲಿಯಲ್ಲಿ ನಡೆದ ಎನ್.ಸಿ.ಸಿ.ಯ ತಳಸೈನಿಕ್ ಕ್ಯಾಂಪ್(ಖಿಖ)ನಲ್ಲಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಬಿಕಾಂ ವಿದ್ಯಾರ್ಥಿ ಯಶಸ್.ಬಿ ಭಾಗವಹಿಸಿದ್ದರು. ಈ ಕ್ಯಾಂಪ್‌ನಲ್ಲಿ ನಡೆದ ಫೈರಿಂಗ್ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನ ಪಡೆಯುವುದರ ಜೊತೆಗೆ ಮೈಸೂರು ಗ್ರೂಪ್‌ನಲ್ಲಿ 'ಬೆಸ್ಟ್ ಕೆಡೆಟ್' ಗೌರವಕ್ಕೂ ಪಾತ್ರರಾಗಿದ್ದು ರೂ.೫೦೦೦/- ಗಳ ನಗದು ಬಹುಮಾನವನ್ನು ಪಡೆದಿರುತ್ತಾರೆ. ಇದರಿಂದ ಕಾಲೇಜಿಗೆ, ೧೪-ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ ಗೆ ಹಾಗೂ ಮೈಸೂರು ಗ್ರೂಪ್‌ಗೆ ಅತ್ಯುತ್ತಮ ಹೆಸರನ್ನು ತಂದಿದ್ದಾರೆ.

ಈ ಎನ್.ಸಿ.ಸಿಯ ತಳಸೈನಿಕ್ ಶಿಬಿರಕ್ಕೆ ಕನಿಷ್ಠ ಆರು ತಿಂಗಳುಗಳ ನಿರಂತರ ತರಬೇತಿ ಮತ್ತು ಆಯ್ಕೆಗಳ ನಂತರ ಆಯ್ಕೆಯಾಗಿರುತ್ತಾರೆ. ಈ ಅವಧಿಯಲ್ಲಿ ಎನ್.ಸಿ.ಸಿ.ಯ ಎಲ್ಲಾ ವಿಭಾಗಗಳ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿ ಅವಧಿಯ ಮೊದಲ ಮೂರು ತಿಂಗಳು ಮೈಸೂರಿನಲ್ಲಿಯೂ ನಂತರದ ಮೂರು ತಿಂಗಳ ತರಬೇತಿಯನ್ನು ಬೆಂಗಳೂರು ಹಾಗೂ ಬೆಳಗಾವಿ ಸೈನಿಕ ಶಾಲೆಗಳಲ್ಲಿ ನೀಡಲಾಗುತ್ತದೆ. ನಂತರ ಈ ವಿದ್ಯಾರ್ಥಿನಿಯು ಕರ್ನಾಟಕ ಹಾಗೂ ಗೋವಾ ರಾಜ್ಯಗಳನ್ನು ಪ್ರತಿನಿಧಿಸಿದ್ದು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಚಿನ್ನದ ಪದಕವನ್ನು ಗೆದ್ದಿರುತ್ತಾರೆ.

ಚಿತ್ರದಲ್ಲಿ ಸಂಸ್ಥೆಯ ಗೌರವ ಅಧ್ಯಕ್ಷರಾದ ಶ್ರೀ.ಗುಂಡಪ್ಪಗೌಡ, ಗೌರವ ಕಾರ್ಯದರ್ಶಿಗಳಾದ ಶ್ರೀ.ಪಿ.ವಿಶ್ವನಾಥ್, ಗೌರವ ಕೋಶಾಧ್ಯಕ್ಷರಾದ ಶ್ರೀ.ಎಸ್.ಎನ್.ಲಕ್ಷ್ಮೀನಾರಾಯಣ, ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಮರೀಗೌಡ, ಎನ್.ಸಿ.ಸಿ ಅಧಿಕಾರಿ ಕ್ಯಾಪ್ಟನ್ ಶ್ರೀಹರ್ಷ ಬಿ.ಎಸ್. ಹಾಗೂ ಪ್ರಶಸ್ತಿ ವಿಜೇತ ಯಶಸ್.ಬಿ ಅವರು ಇದ್ದಾರೆ.



